

# ಮೋಹಕ ಮರಾಠಾ ಒಡವೆ

ಮಹಾರಾಷ್ಟ್ರದಲ್ಲಿ ಇಂದಿಗೂ ಸಾಂಪ್ರದಾಯಕ ಚಿನ್ನದ ಒಡವೆಗಳು ಜನಪ್ರಿಯ. ಗಟ್ಟಿ ಚಿನ್ನ, ಮುತ್ತು ಬಳಸಿ ಮಾಡುವ ಬಹುತೇಕ ಆಭರಣಗಳು ಹಲವು ತಲೆಮಾರುಗಳನ್ನು ದಾಟಿ ಈಗ ಫ್ಯಾಷನ್ ಟ್ರೆಂಡ್ ಆಗಿವೆ. ಇವುಗಳಲ್ಲಿ ಕೆಲವು ಉತ್ತರ ಕನ್ನಡ, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕೂಡಾ ಕಾಣಸಿಗುತ್ತವೆ.

■ ಎಸ್. ಹೆಗಡೆ

ಬದುಕಿನುದ್ದಕ್ಕೂ ಜೊತೆಜೊತೆಯಾಗಿ ಸಾಗಲು ಹೆಣ್ಣು– ಗಂಡಿನ ನಡುವೆ ಒಂದು ಸುಮಧುರ ಸಾಂಗತ್ಯಕ್ಕೆ ನಾಂದಿ ಹಾಡುತ್ತದೆ ಮದುವೆ ಎಂಬ ಅನುಬಂಧ. ಸಂಭ್ರಮದ ಮಧ್ಯೆ ಸಾಂಪ್ರದಾಯಕ ಆಚರಣೆ ಅವರವರ ಸಂಸ್ಕೃತಿಗೆ ಅನುಗುಣವಾಗಿ ನಡೆಯುವುದಲ್ಲದೇ ಅದಕ್ಕೆ ಆಧುನಿಕತೆಯ ಲೇಪವೂ ಸೇರಿಕೊಂಡಿದೆ. ಜೀವನದ ಹೊಸ ಮಜಲಿನಲ್ಲಿ ಇಡುವ ಮೊದಲ ಹೆಜ್ಜೆ ಅದ್ದೂರಿಯಾಗಿರಬೇಕೆಂಬ ಬಯಕೆ ಸಹಜ ಕೂಡ. ಈ ಶುಭ ಸಮಯದಲ್ಲಿ ಆಭರಣ, ಸೀರೆಗಳ ವಿನ್ಯಾಸಗಳು ವಧುವಿನ ಆದ್ಯತೆ, ಆಯ್ಕೆಗೆ ತಕ್ಕಂತೆ ಇರುವುದರ ಜೊತೆಗೆ ಸಂಪ್ರದಾಯ, ಸಂಸ್ಕೃತಿ, ಪ್ರಾದೇಶಿಕತೆಯ ಮಿಳಿತವೂ ಇಣುಕಿ ಹಾಕುತ್ತದೆ.

ಮಹಾರಾಷ್ಟ್ರದ ವಧು ತೊಡುವ ಒಡವೆಗಳನ್ನೇ ತೆಗೆದುಕೊಂಡರೆ ಅವರ ಸಂಸ್ಕೃತಿಯ ವೈಶಿಷ್ಟ್ಯ ಎದ್ದು ತೋರುತ್ತದೆ. ಶುದ್ಧ ಚಿನ್ನದ ಒಡವೆಗಳಿಗೆ ಅಲ್ಲಿ ಪ್ರಾಶಸ್ತ್ಯ. ಅಮೂಲ್ಯ ಮುತ್ತುಗಳಿಗೆ ಅಲ್ಲಿ ಜಾಗವಿದ್ದರೂ ವಜ್ರ, ಮೀನಾಕರಿ, ಕುಂದನ್ ಮೊದಲಾದವುಗಳು ಸಾಂಪ್ರದಾಯಕ ಆಭರಣಗಳಲ್ಲಿ ಅಪರೂಪವೇ. ಅಡಿಯಿಂದ ಮುಡಿಯವರೆಗೆ ಸಿಂಗರಿಸಿ ಅಂದ ಹೆಚ್ಚಿಸುವ ಈ ಆಭರಣಗಳಲ್ಲಿ ಕೆಲವಾದರೂ ಅಜ್ಜಿಯಿಂದ ತಾಯಿಗೆ, ಮಗಳಿಗೆ, ಮೊಮ್ಮಗಳಿಗೆ.. ಹಸ್ತಾಂತರವಾಗುತ್ತ ಬಂದಂತವು. ಮುಂಬಯಿಗೆ ಹತ್ತಿರವಿರುವ ಉತ್ತರಕನ್ನಡ (ಕಾರವಾರ), ಬೆಳಗಾವಿ, ಅವಿಭಜಿತ ಧಾರವಾಡ ಜಿಲ್ಲೆಗಳ ಕೆಲವು ಸಮುದಾಯಗಳಲ್ಲಿ ಈಗಲೂ ಈ ಮಹಾರಾಷ್ಟ್ರ ಶೈಲಿಯ ಆಭರಣಗಳು ಮಿಂಚುತ್ತಿವೆ.

ಮಹಾರಾಷ್ಟ್ರದ ಸಾಂಪ್ರದಾಯಕ ಒಡವೆ ಎಂದ ಕೂಡಲೇ ಕಣ್ಣ ಮುಂದೆ ನಿಲ್ಲುವಂತಹದ್ದು ಮೂಗಿಗೆ ಧರಿಸುವಂತಹ ನಾಥ್ ಅಥವಾ ನತ್ತು. ಅರ್ಧ ಚಂದ್ರಾಕಾರದಲ್ಲಿ ಚಿನ್ನ ಹಾಗೂ ಮುತ್ತಿನಿಂದ ತಯಾರಿಸುವ ಈ ಒಡವೆ ಮದುವೆಯಲ್ಲಿ ಮಾತ್ರವಲ್ಲ, ಮನೆಯಲ್ಲಿ ಜರುಗುವ ವಿಶೇಷ ಸಮಾರಂಭಗಳಲ್ಲಿ ಮಹಿಳೆಯರು ಧರಿಸುವಂತಹ ಅತ್ಯಂತ ಚೆಂದದ ಒಡವೆ. ಬ್ರಹ್ಮಣಿ ಮತ್ತು ಕಾರವಾರಿ ನತ್ತುಗಳೆಂಬ ವೈವಿಧ್ಯವಿದ್ದು, ಇದೀಗ ಸೆಲೆಬ್ರಿಟಿಗಳು ಧರಿಸುವುದು ಫ್ಯಾಷನ್ ಆಗಿಬಿಟ್ಟಿದೆ. ಇದು ಪೇಶ್ವೆ ಕಾಲದಿಂದ ಬಂದಿದ್ದಂತೆ.

